# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **692** |
| **ಸದಸ್ಯರ ಹೆಸರು** | : | **ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **22.07.2024** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾಡು ಪ್ರಾಣಿಗಳಿಂದ ಜನವಸತಿ ಪ್ರದೇಶ ಮತ್ತು ರೈತರ ಬೆಳೆದ ಬೆಳೆಗಳು ಸಾಕಷ್ಟು ಪ್ರಮಾಣದಲ್ಲಿ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆನಾಶ ಪ್ರಕರಣಗಳಿಗೆ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿದ ದರದನ್ವಯ ಇ-ಪರಿಹಾರದ ಮೂಲಕ ಸೂಕ್ತ ಪರಿಹಾರ ಧನ ನೀಡಲಾಗುತ್ತಿದೆ.<br><br>ಚಾಲ್ತಿಯಲ್ಲಿದ್ದ ಪರಿಹಾರ ದರವನ್ನು ಪರಿಷ್ಕರಿಸಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್.ಡಬ್ಲ್ಯೂ.ಎಲ್ 2022 ದಿನಾಂಕ: 18.01.2023 ರಲ್ಲಿ ದ್ವಿಗುಣಗೊಳಿಸಿ ಆದೇಶಿಸಲಾಗಿರುತ್ತದೆ. |
| (ಇ) | ರೈತರ ಬೆಳೆಗಳಿಗೆ ಅಲ್ಪ ಪರಿಹಾರ ನೀಡುತ್ತಿದ್ದು, ಹೆಚ್ಚಿನ ಮೊತ್ತದ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮವೇನು; | ಸರ್ಕಾರದ ಆದೇಶ ಸಂಖ್ಯೆ: ಅಪಜೀ 130 ಎಫ್.ಡಬ್ಲ್ಯೂ.ಎಲ್ 2016, ದಿನಾಂಕ:19.09.2016 ರನ್ವಯ ನೀಡುತ್ತಿದ್ದ ಪರಿಹಾರ ಧರವನ್ನು ಪರಿಷ್ಕರಿಸಿ, ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್.ಡಬ್ಲ್ಯೂ.ಎಲ್ 2022 ದಿನಾಂಕ: 18.01.2023 ರಲ್ಲಿ ದ್ವಿಗುಣಗೊಳಿಸಿ ಆದೇಶಿಸಲಾಗಿರುತ್ತದೆ.<br><br>ಸದರಿ ದರದನ್ವಯ ಬೆಳೆ ನಷ್ಟವುಂಟಾದ ರೈತರಿಗೆ ಇಲಾಖೆಯಿಂದ ಪರಿಹಾರ ಧನ ವಿತರಿಸಲಾಗುತ್ತಿದೆ. |
| (ಈ) | ಕಾಡು ಪ್ರಾಣಿಗಳು ಹೊಲಗಳಿಗೆ ಮತ್ತು ಜನವಸತಿ ಪ್ರದೇಶಗಳಿಗೆ ಪ್ರವೇಶಿಸದಂತೆ ಸರ್ಕಾರ ಕೈಗೊಂಡ ಕ್ರಮವೇನು? | ಪ್ರಾಣಿಗಳು ಕಾಡಿನಿಂದ ನಾಡಿಗೆ ಬರದಂತೆ ವನ್ಯಪ್ರಾಣಿಗಳ ನಿಯಂತ್ರಣಕ್ಕೆ ಚೈನ್ ಲಿಂಕ್ ಮೆಷ್, ಜಾನುವಾರು ತಡೆ ಕಂದಕ, ಮುಳ್ಳು ತಂತಿಬೇಲಿ, ಸೌರಶಕ್ತಿ ತಂತಿ ಬೇಲಿ, ಕಲ್ಲು ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಕಾಡುಪ್ರಾಣಿಗಳು ಹೊಲಗಳಿಗೆ ಮತ್ತು ಜನವಸತಿ ಪ್ರದೇಶಗಳಿಗೆ ಪ್ರವೇಶಿಸದಂತೆ ಹಾಗೂ ಜನರ ರಕ್ಷಣೆಗಾಗಿ ಸಿಬ್ಬಂದಿಯವರು ಗಸ್ತುಮಾಡಿ ಪಟಾಕಿಗಳನ್ನು ಸಿಡಿಸಿ ಸದ್ದುಮಾಡಿ ವನ್ಯಪ್ರಾಣಿಗಳನ್ನು ಕಾಡಿಗೆ ಮರಳಿಸುವ ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ವನ್ಯಪ್ರಾಣಿಗಳ ಸಂಚಾರ ಪದೇಪದೇ ಕಂಡುಬಂದಲ್ಲಿ ಇಲಾಖೆ ವತಿಯಿಂದ ಬೋನನ್ನು ಅಳವಡಿಸಿ ವನ್ಯಪ್ರಾಣಿಗಳನ್ನು ಸೆರೆಹಿಡಿದು ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 104 ಎಫ್‌ಡಬ್ಲ್ಯೂಎಲ್ 2024**

Behande

**(ಈಶ್ವರ ಬಿ.ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.